# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು (2405-00-101-0-03) ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲು ವಿವಿಧ ಲೆಕ್ಕ ಶೀರ್ಷಿಕೆಗಳನ್ನು ಒಗ್ಗೂಡಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:-
1. ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ/228/ವೆಚ್ಚ-4/2023, ದಿನಾಂಕ: 31-07-2023.
2. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಏಕ ಕಡತ ಪತ್ರ ಸಂಖ್ಯೆ: DoF-TECHO-FYP1/31/2023, ದಿನಾಂಕ: 17-07-2023.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆಯವ್ಯಯ ಸಲಹಾ ಟಿಪ್ಪಣಿಯ ಅನುಬಂಧ-4 ರಲ್ಲಿ ಲೆಕ್ಕ ಶೀರ್ಷಿಕೆ 2405-00-101-0-54, 2405-00-110-0-02, 2405-00-110-0-03, 2405-00-195-0-01 ಗಳನ್ನು ಲೆಕ್ಕ ಶೀರ್ಷಿಕೆ 2405-00-101-0-03 ಗೆ ವಿಲೀನಗೊಳಿಸಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು ಎಂದು ಮರುನಾಮೀಕರಿಸಿ ಕ್ರಮವಾಗಿ, ರೂ.200.00 ಲಕ್ಷ, ರೂ.125.00 ಲಕ್ಷ, ರೂ.400.00 ಲಕ್ಷ, ರೂ.50.00 ಲಕ್ಷ, ರೂ.605.00 ಲಕ್ಷ ಹೀಗೆ ಒಟ್ಟು ರೂ.1380.00 ಲಕ್ಷಗಳನ್ನು ಒದಗಿಸಿ, ಅದರಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, 2023-24ನೇ ಸಾಲಿನ ಆಯವ್ಯಯದಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು ಸಮೀಕರಣಗೊಳಿಸ ಲಾಗಿರುತ್ತದೆ.

| ಕ್ರ. ಸಂ. | ಯೋಜನೆಗಳ ವಿವರ ಹಾಗೂ ಲೆಕ್ಕ ಶೀರ್ಷಿಕೆ | ವಿಲೀನಗೊಳಿಸಿರುವ ಯೋಜನೆ ಹಾಗೂ ಲೆಕ್ಕ ಶೀರ್ಷಿಕೆ |
|---|---|---|
| 1. | ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ 2405-00-101-0-03 | ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು- 2405-00-101-0-03 |
| 2. | ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಸರಬರಾಜು 2405-00-110-0-02 | |
| 3. | ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ – 2405-00-101-0-54 | |
| 4 | ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ 2405-00-110-0-03 | |
| 5 | ವಾಣಿಜ್ಯ ಬ್ಯಾಂಕುಗಳಿಗೆ ವ್ಯತ್ಯಾಸದ ಬಡ್ಡಿ ಮರುಪಾವತಿ 2405-00-195-0-01 | |

ಹಿಂದಿನ ವರ್ಷಗಳಲ್ಲಿ ಮೇಲ್ಕಂಡ 5 ಯೋಜನೆಗಳಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (2405-00-101-0-03-106), ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಸರಬರಾಜು (2405-00-110-0-02-106) ಹಾಗೂ ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ (2405-00-101-0-54-051) ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿ ವಲಯ ಮಟ್ಟದ ಅಧಿಕಾರಿಗಳು ಮಂಜೂರಾತಿ ನೀಡಿದ ನಂತರ ತಾಲ್ಲೂಕು ಮಟ್ಟದ ಅಧಿಕಾರಿಗಳು ಬಿಲ್ಲುಗಳನ್ನು ತಯಾರಿಸಿ ಜಿಲ್ಲಾಮಟ್ಟದ ಅಧಿಕಾರಿಗಳು ಮೇಲು ರುಜುಗೊಳಿಸುತ್ತಿದ್ದರು.

ಇನ್ನುಳಿದ ಯೋಜನೆಗಳಾದ ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ (2405-00-110-0-03) ದಲ್ಲಿ ವಲಯಮಟ್ಟದ ಅಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದನೆ ನೀಡಿ ಮೀನುಗಾರಿಕೆ ನಿರ್ದೇಶನಾಲಯದಲ್ಲಿ ಬಿಲ್ ತಯಾರಿಸಿ ಮೀನುಗಾರಿಕೆ ನಿರ್ದೇಶಕರು ಮೇಲು ರುಜುಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿತ್ತು. ವಾಣಿಜ್ಯ ಬ್ಯಾಂಕುಗಳಿಗೆ ವ್ಯತ್ಯಾಸದ ಬಡ್ಡಿ ಮರುಪಾವತಿ (2405-00-195-0-01) ಯೋಜನೆಯನ್ನು ವಲಯಮಟ್ಟದ ಅಧಿಕಾರಿಗಳು ತಯಾರಿಸಿದ ಬಿಲ್ಲುಗಳಿಗೆ ಮೀನುಗಾರಿಕೆ ನಿರ್ದೇಶಕರು ಮೇಲು ರುಜುಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿತ್ತು. ಅಲ್ಲದೇ ಹಿಂದಿನ ವರ್ಷಗಳಲ್ಲಿ ವಿವಿಧ ಯೋಜನೆಗಳನ್ನು ಆಯಾ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಲೆಕ್ಕಶೀರ್ಷಿಕೆಯನ್ನು ಅಧಿಕಾರಿಗಳ DDO code ಗಳಿಗೆ ಮ್ಯಾಪಿಂಗ್ ಮಾಡಲಾಗಿತ್ತು.

ಆದ್ದರಿಂದ, 2023-24ನೇ ಸಾಲಿನಲ್ಲಿ ಸದರಿ ಯೋಜನೆ ಹಾಗೂ ಲೆಕ್ಕ ಶೀರ್ಷಿಕೆ ಗಳನ್ನು ಸಮೀಕರಣಗೊಳಿಸಿರುವುದರಿಂದ ಈ ಹಿಂದಿನ 5 ಯೋಜನೆಗಳನ್ನು ಒಂದೇ ಲೆಕ್ಕ ಶೀರ್ಷಿಕೆಯಡಿ ಮ್ಯಾಪಿಂಗ್ ಮಾಡಿಸಿ ಒಂದೇ ರೀತಿಯಲ್ಲಿ ಅನುಷ್ಠಾನ ಗೊಳಿಸುವುದು ಸೂಕ್ತವಾಗಿರುತ್ತದೆ. ವಿಲೀನ ಪೂರ್ವದಲ್ಲಿನ ಮಾರ್ಗಸೂಚಿಯಂತೆ ಫಲಾನುಭವಿಗಳ ಆಯ್ಕೆ ಮಾಡಲಾಗುವುದು ಎಂದು ನಿರ್ದೇಶಕರು ತಿಳಿಸಿರುತ್ತಾರೆ.

ಮುಂದುವರೆದು, ಸದರಿ ಲೆಕ್ಕಶೀರ್ಷಿಕೆಗಳಡಿ ಈಗಾಗಲೇ ಬಿಡುಗಡೆಯಾದ ಅನುದಾನ ಮತ್ತು ಮುಂದಿನ ದಿನಗಳಲ್ಲಿ ಬಿಡುಗಡೆ ಮಾಡಲಾಗುವ ಅನುದಾನವನ್ನು ವೆಚ್ಚ ಮಾಡಲು ಅನುವಾಗುವಂತೆ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-101--0-03 ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ (ಯೋಜನೆ) ಅಡಿಯ ಉಪ ಶೀರ್ಷಿಕೆ -051, -059 ಹಾಗೂ -106 ರಲ್ಲಿ ಅನುಷ್ಠಾನಗೊಳಿಸುವ 5 ಘಟಕಗಳಾದ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ, ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಸರಬರಾಜು, ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ, ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ ಮತ್ತು ವಾಣಿಜ್ಯ

ಬ್ಯಾಂಕುಗಳಿಗೆ ವ್ಯತ್ಯಾಸದ ಬಡ್ಡಿ ಮರುಪಾವತಿಗೆ ಸಂಬಂಧಿಸಿ ಅನುಷ್ಠಾನಾಧಿಕಾರಿಯಾಗಿ ತಾಲೂಕು ಮಟ್ಟದ ಅಧಿಕಾರಿಗಳಿಗೆ ಬಿಲ್ಲು ತಯಾರಿಸಲು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಮಂಜೂರಾತಿ ನೀಡಿ ಮೇಲುರುಜುಗೊಳಿಸಿ ಅನುಷ್ಠಾನಗೊಳಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-122 ಮೀಇಯೋ 2023, ಬೆಂಗಳೂರು, ದಿನಾಂಕ:16-08-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಲೆಕ್ಕ ಶೀರ್ಷಿಕೆ 2405-00-101-0-54, 2405-00-110-0-02, 2405-00-110-0-03, 2405-00-195-0-01 ಗಳನ್ನು ಲೆಕ್ಕ ಶೀರ್ಷಿಕೆ 2405-00-101-0-03 ಗೆ ವಿಲೀನಗೊಳಿಸಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು ಎಂದು ಮರುನಾಮೀಕರಿಸಿ ಆದೇಶಿಸಿದೆ.

ಮುಂದುವರೆದು, ಲೆಕ್ಕ ಶೀರ್ಷಿಕೆ 2405-00-101-0-03 ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು ಅಡಿಯಲ್ಲಿ ಬರುವ ಉಪ ಶೀರ್ಷಿಕೆ -051, -059 ಹಾಗೂ -106 ರಲ್ಲಿ ಅನುಷ್ಠಾನಗೊಳಿಸುವ 5 ಘಟಕಗಳಾದ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ, ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಸರಬರಾಜು, ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ, ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ವ್ಯತ್ಯಾಸದ ಬಡ್ಡಿ ಮರುಪಾವತಿಗೆ ಸಂಬಂಧಿಸಿ ಅನುಷ್ಠಾನಾಧಿಕಾರಿಯನ್ನಾಗಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಬಿಲ್ಲು ತಯಾರಿಸಲು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಮಂಜೂರಾತಿ ನೀಡಿ ಮೇಲು ರುಜುಗೊಳಿಸಿ ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ/228/ವೆಚ್ಚ-4/2023, ದಿನಾಂಕ: 31-07-2023 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
K.S. Chinnubai 16/8/2023
(ಚಿನ್ನೂಬಾಯಿ ಕೆ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

16/8/2023

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮೀನುಗಾರಿಕೆ ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4. ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
10. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ). ಮೀನುಗಾರಿಕೆ ಇಲಾಖೆ.
11. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

<u>**ಪ್ರತಿಯನ್ನು**</u>

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.